ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
**KARNATAK UNIVERSITY, DHARWAD**
NAAC Accredited with "A" Grade 2022
**"UNIVERSITY WITH POTENTIAL FOR EXCELLENCE"**
ಸಾಮಾನ್ಯ ಆಡಳಿತ ವಿಭಾಗ
G.A.D.

"Diamond Jubilee Year 1949-2009"
"ವಜ್ರ ಮಹೋತ್ಸವ ವರ್ಷ 1949–2009"
Email:gad@kud.ac.in
kudgad@gmail.com

Azadi Ka Amrit Mahotsav
ಪಾವಟೆನಗರ, ಧಾರವಾಡ.
Pavate Nagar, Dharwad.
ದೂರವಾಣಿ ಸಂ.0836-2215358
Tel Ph. No.**0836-2215358**
Website : **www.kud.ac.in**

ನಂ.ಕವಿವಿ/ಜಿಎಡಿ/2023-24/ 117 ದಿನಾಂಕ: 19.08.2023.

## ಸುತ್ತೋಲೆ

ವಿಷಯ: ಆಗಸ್ಟ್ 20 ರಂದು ಭಾನುವಾರ **"ಸದ್ಭಾವನಾ ದಿನ"** ವನ್ನಾಗಿ ಆಚರಿಸುವ ಕುರಿತು.

ಉಲ್ಲೇಖ: ಕರ್ನಾಟಕ ಸರ್ಕಾರದ ಸುತ್ತೋಲೆ ನಂ: ಸಿಆಸುಇ 05 ಪಿಹೆಚ್ಎಲ್ 2023 ದಿನಾಂಕ: 16.08.2023

ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸ್ನಾತಕೋತ್ತರ / ಆಡಳಿತಾತ್ಮಕ ವಿಭಾಗಗಳ ಮುಖ್ಯಸ್ಥರು ಹಾಗೂ ಎಲ್ಲ ಘಟಕ / ಸಂಲಗ್ನ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳಿಗೆ ಈ ಮೂಲಕ ತಿಳಿಸುವುದೇನೆಂದರೆ, ಉಲ್ಲೇಖಿತ ಸರ್ಕಾರದ ಆದೇಶದಂತೆ **ಆಗಸ್ಟ್ 20 ರಂದು ಭಾನುವಾರ "ಸದ್ಭಾವನಾ ದಿನ"** ವನ್ನು ರಾಜ್ಯದಾದ್ಯಂತ ಆಚರಿಸುವುದರೊಂದಿಗೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂದು ಸೂಚಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿಯೂ ಸಹ ಆಯಾ ವಿಭಾಗದ ಮುಖ್ಯಸ್ಥರು ತಮ್ಮ ವಿಭಾಗಗಳಲ್ಲಿಯೇ ಈ ಕೆಳಕಂಡ ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆಯನ್ನು ಪ್ರತಿಜ್ಞೆಗೈಯುವ ಮೂಲಕ ಆಚರಿಸಬೇಕೆಂದು ಈ ಮೂಲಕ ತಿಳಿಸಲಾಗಿದೆ.

### ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಭೇದಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಭೇಧಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇವೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.

ಮುಂದುವರೆದು, ಈ ಕಾರ್ಯಕ್ರಮವನ್ನು ಜರುಗಿಸಿರುವ ಕುರಿತು ಅನುಪಾಲನಾ ವರದಿಯನ್ನು ಸಾಮಾನ್ಯ ಆಡಳಿತ ವಿಭಾಗಕ್ಕೆ ಇ-ಮೇಲ್ ಮೂಲಕ ಭಾವಚಿತ್ರದೊಂದಿಗೆ ಕಳುಹಿಸಬೇಕೆಂದು ಸೂಚಿಸಲಾಗಿದೆ.

19/8

ಕುಲಸಚಿವರು

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸುಇ (ರಾಜಕೀಯ) ಕರ್ನಾಟಕ ಸರ್ಕಾರದ ಸಚಿವಾಲಯ, ವಿಧಾನಸೌಧ, ಬೆಂಗಳೂರು.
2. ಕುಲಸಚಿವರು (ಮೌಲ್ಯಮಾಪನ), ಕ.ವಿ.ವಿ., ಧಾರವಾಡ.
3. ಹಣಕಾಸು ಅಧಿಕಾರಿಗಳು, ಕ.ವಿ.ವಿ., ಧಾರವಾಡ.
4. ಎಲ್ಲ ಸ್ನಾತಕೋತ್ತರ ಹಾಗೂ ಆಡಳಿತ ವಿಭಾಗಗಳ ಮುಖ್ಯಸ್ಥರುಗಳು, ಹಾಗೂ ಸಂಯೋಜಕರು, ಕ.ವಿ.ವಿ, ಧಾರವಾಡ

(ಮು.ತಿ.ನೋ)

5. ಆಡಳಿತಾಧಿಕಾರಿಗಳು, ಕವಿವಿ ಸ್ನಾತಕೋತ್ತರ ಕೇಂದ್ರಗಳು, ಗದಗ ಹಾಗೂ ಕಾರವಾರ.
6. ಗ್ರಂಥಪಾಲಕರು, ಪ್ರೊ. ಶಿ.ಶಿ. ಬಸವನಾಳ ಗ್ರಂಥಾಲಯ, ಕ.ವಿ.ವಿ. ಧಾರವಾಡ.
7. ಎಲ್ಲ ನಿರ್ದೇಶಕರು/ಸಂಯೋಜಕರು, ಕ.ವಿ.ವಿ, ಧಾರವಾಡ.
8. ಎಲ್ಲ ಉಪಕುಲಸಚಿವರುಗಳು, ಕ.ವಿ.ವಿ, ಧಾರವಾಡ.
9. ಪ್ರಾಚಾರ್ಯರು, ಎಲ್ಲ ಘಟಕ ಮಹಾವಿದ್ಯಾಲಯಗಳು/ ಮಾಧ್ಯಮಿಕ ಶಾಲೆ/ ಪ್ರಾಥಮಿಕ ಶಾಲೆ, ಧಾರವಾಡ.
10. ಸ್ಥಾನಿಕ ಅಭಿಯಂತರರು, ಕ.ವಿ.ವಿ, ಧಾರವಾಡ.
11. ಉದ್ಯಾನಾಧಿಕಾರಿಗಳು, ಕ.ವಿ.ವಿ. ಧಾರವಾಡ.
12. ನಿಲಯಪಾಲಕರು, ಎಲ್ಲ ವಿದ್ಯಾರ್ಥಿ / ವಿದ್ಯಾರ್ಥಿನಿಯರ ವಸತಿ ನಿಲಯಗಳು, ಕ.ವಿ.ವಿ/ಕೆ.ಸಿ.ಡಿ. ಆವರಣ ಧಾರವಾಡ.
13. ಅಧ್ಯಕ್ಷರು, ಸ್ನಾತಕೋತ್ತರ ವಿದ್ಯಾರ್ಥಿಕೂಟ, ಕ.ವಿ.ವಿ. ಧಾರವಾಡ
14. ಅಧ್ಯಕ್ಷರು, ಸ್ನಾತಕೋತ್ತರ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಕ.ವಿ.ವಿ. ಧಾರವಾಡ.
15. ಅಧ್ಯಕ್ಷರು, ಸ್ನಾತಕೋತ್ತರ ಶಿಕ್ಷಕರ ಸಂಘ, ಕ.ವಿ.ವಿ. ಕರ್ನಾಟಕ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯಗಳ ಶಿಕ್ಷಕರ/ ಪ.ಜಾತಿ/ಪ.ಪಂಗಡ ನೌಕರರ ಸಂಘಗಳು, ಕ.ವಿ.ವಿ ಹಾಗೂ ಮಹಾವಿದ್ಯಾಲಯ ಧಾರವಾಡ.
16. ಅಧ್ಯಕ್ಷರು, ಕ.ವಿ.ವಿ ನಿವೃತ್ತ ಶಿಕ್ಷಕೇತರ ನೌಕರರ ಸಂಘ (ನೋಂದಾಯಿತ). ಧಾರವಾಡ.
17. ಅಧ್ಯಕ್ಷರು, ಸ್ನಾತಕೋತ್ತರ ವಿದ್ಯಾರ್ಥಿ ಸಂಘ ಕ.ವಿ.ವಿ, ಧಾರವಾಡ.

**ಪ್ರತಿ ಮಾಹಿತಿಗಾಗಿ:**

1. ಕುಲಪತಿಗಳ ಆಪ್ತ ಕಾರ್ಯದರ್ಶಿಗಳು, ಕ.ವಿ.ವಿ, ಧಾರವಾಡ.
2. ಕುಲಸಚಿವರ ಆಪ್ತ ಸಹಾಯಕರು, ಕ.ವಿ.ವಿ, ಧಾರವಾಡ.
3. ಕುಲಸಚಿವರು (ಮೌಲ್ಯಮಾಪನ) ಆಪ್ತ ಸಹಾಯಕರು, ಕ.ವಿ.ವಿ. ಧಾರವಾಡ.
4. ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಕ.ವಿ.ವಿ., ಧಾರವಾಡ.

**ಕರ್ನಾಟಕ ಸರ್ಕಾರ**

**ಸಂಖ್ಯೆ:** ಸಿಆಸುಇ 05 ಪಿಹೆಚ್‌ಎಲ್ 2023

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16.08.2023.

Registrar Secretariat
No: A 1099 Date 17 AUG 2023

**ಸುತ್ತೋಲೆ**

**ವಿಷಯ:** "ಸದ್ಭಾವನಾ ದಿನ" ವನ್ನು ಆಚರಿಸುವ ಕುರಿತು.

**ಉಲ್ಲೇಖ:** ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ, ಇವರ ಪತ್ರ ದಿನಾಂಕ:10/08/2023.

** * **

ಎಲ್ಲಾ ಧರ್ಮ, ಭಾಷೆ ಹಾಗೂ ರಾಜ್ಯಗಳ ಜನರಲ್ಲಿ ಸೌಹಾರ್ದತೆಯನ್ನು ಉತ್ತೇಜಿಸಿ ಎಲ್ಲರಲ್ಲೂ ಸದ್ಭಾವನೆಯನ್ನು ಮೂಡಿಸಿ ಹಿಂಸಾಚಾರವನ್ನು ತ್ಯಜಿಸುವಂತೆ ಮಾಡಲು ಕೇಂದ್ರ ಸರ್ಕಾರದ ಆದೇಶದಂತೆ, ಪ್ರತಿ ವರ್ಷ ಆಗಸ್ಟ್, 20 ರಂದು "ಸದ್ಭಾವನಾ ದಿನ"ವನ್ನು ಆಚರಿಸಲಾಗುತ್ತಿದೆ. ಅದರಂತೆ ಈ ವರ್ಷವೂ ಕೂಡ **ಆಗಸ್ಟ್, 20 ರಂದು ಭಾನುವಾರ "ಸದ್ಭಾವನಾ ದಿನ"**ವನ್ನಾಗಿ ರಾಜ್ಯದಾದ್ಯಂತ ಆಚರಿಸಬೇಕೆಂದು ಸರ್ಕಾರವು ನಿರ್ಧರಿಸಿದೆ. ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆಯ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿದೆ. ಈ ಸಂಬಂಧವಾಗಿ ತಮ್ಮ ಇಲಾಖೆಯ ವ್ಯಾಪ್ತಿಗೆ ಒಳಪಡುವ ಕಛೇರಿಗಳಲ್ಲಿ ಸದ್ಭಾವನಾ ದಿನವನ್ನು ಆಚರಿಸುವುದರೊಂದಿಗೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕೆಂದು ತಿಳಿಸಿದೆ.

ಈ ಕಾರ್ಯಕ್ರಮವನ್ನು ನಡೆಸಿರುವ ಕುರಿತು ಎಲ್ಲ ಇಲಾಖಾ ಮುಖ್ಯಸ್ಥರುಗಳು ಹಾಗೂ ರಾಜ್ಯದ ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಅನುಪಾಲನಾ ವರದಿಯನ್ನು ಕಳುಹಿಸಬೇಕೆಂದು ಸೂಚಿಸಿದೆ.

**(ಮಹೇಶ್. ಆರ್)**
ಸರ್ಕಾರದ ಅಧೀನ ಕಾರ್ಯದರ್ಶಿ
ಸಿಆಸುಇ (ರಾಜಕೀಯ)

GAD Section 17/8

6852 16/8/2023

**ಇವರಿಗೆ:**

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳು.
2. ಸ್ಥಾನಿಕ ಆಯುಕ್ತರು, ಕರ್ನಾಟಕ ಭವನ, ನವದೆಹಲಿ.
3. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು, ಕರ್ನಾಟಕ.
4. ಎಲ್ಲಾ ಇಲಾಖಾ ಮುಖ್ಯಸ್ಥರುಗಳು.
5. ಎಲ್ಲಾ ವಿಶ್ವವಿದ್ಯಾನಿಲಯಗಳ ಕುಲಸಚಿವರುಗಳು.
6. ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು.

# ಸದ್ಭಾವನಾ ದಿನಾಚರಣೆಯ ಪ್ರತಿಜ್ಞೆ

ಜಾತಿ, ಧರ್ಮ, ಪ್ರದೇಶ, ಮತ ಅಥವಾ ಭಾಷೆಯ ಭೇದಭಾವವಿಲ್ಲದೇ ಭಾರತದ ಎಲ್ಲ ಜನತೆಯ ಭಾವೈಕ್ಯ ಮತ್ತು ಸೌಹಾರ್ದಕ್ಕಾಗಿ ಕಾರ್ಯ ನಿರ್ವಹಿಸುತ್ತೇನೆಂದು ನಾನು ಪ್ರತಿಜ್ಞೆ ಮಾಡುತ್ತೇನೆ. ಅಲ್ಲದೇ, ವೈಯಕ್ತಿಕವಾಗಿಯಾಗಲೀ ಅಥವಾ ಸಾಮೂಹಿಕವಾಗಿಯಾಗಲೀ ನಮ್ಮಲ್ಲಿರುವ ಎಲ್ಲ ಭೇದಭಾವಗಳನ್ನು ಹಿಂಸಾಚಾರಕ್ಕೆ ಅವಕಾಶ ನೀಡದೆ ಸಮಾಲೋಚನೆ ಹಾಗೂ ಸಂವಿಧಾನಾತ್ಮಕ ಕ್ರಮಗಳ ಮೂಲಕ ಪರಿಹರಿಸುತ್ತೇವೆಂದು ಸಹ ಪ್ರತಿಜ್ಞೆ ಮಾಡುತ್ತೇನೆ.